ಸಂಪನ್ಮೂಲ ಅಭಿವೃದ್ಧಿ ಸಚಿವರು):

ಅ) ಒಟ್ಟು 3812 ಜನರು

ಆ) ಒಟ್ಟು 2105 ಜನರು

ಇ) ಮಂಡಳಿಯು ಹಂಚಿಕೆದಾರರೊಂದಿಗೆ ಮಾಡಿಕೊಂಡಿರುವ ಗುತ್ತಿಗೆ ಒಡಂಬಡಿಕೆ ಪ್ರಕಾರ ಉದ್ದಿಮೆದಾರರು ಭೂಮಿಯನ್ನು ಕಳೆದುಕೊಂಡವರಿಗೆ ಕೆಲಸ ಕೊಡುವ ಬಗ್ಗೆ ಷರತ್ತು ಹಾಕಲಾಗಿದೆ. ಭೂಮಿಯನ್ನು ಕಳೆದುಕೊಂಡವರು ಮಂಡಳಿಗೆ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಸೂಕ್ತ ಕೈಗಾರಿಕಾ ಘಟಕಗಳಿಗೆ ಕಳುಹಿಸಿ ಕೆಲಸ ಕೊಡುವ ಬಗ್ಗೆ ಶಿಫಾರಸ್ಸು ಮಾಡಲಾಗುವುದು. ದೊಡ್ಡಬಳ್ಳಾಪುರ ಕೈಗಾರಿಕಾ ಪ್ರದೇಶದ ಉದ್ದಿಮೆದಾರರು ಭೂಮಿಯನ್ನು ಕಳೆದುಕೊಂಡವರಿಗೆ ಕೆಲಸ ಕೊಡದಿರುವ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ.

ಈ) ಈ ಕೈಗಾರಿಕೆಗಳಲ್ಲಿ ರಾಜ್ಯದವರು 3522 ಜನರು (ತಾಲ್ಲೂಕಿನವರು 2105 ಮತ್ತು ರಾಜ್ಯದೊಳಗಿನ ಇತರೆ ಭಾಗದವರು 1417) ಮತ್ತು ಹೊರ ರಾಜ್ಯದಿಂದ 290 ಜನರು ಉದ್ಯೋಗದಲ್ಲಿ ತೊಡಗಿರುತ್ತಾರೆ.

ತುರುವೇಕೆರೆ ತಾಲ್ಲೂಕಿನ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವುದು.

2245(2917)

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ.(ಅಣ್ಣಯ್ಯ)(ತುರುವೇಕೆರೆ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಅನಧಿಕೃತ ಪಂಪ್‌ಸೆಟ್‌ಗಳು ಇವೆ?

ಆ) ಅನಧಿಕೃತ ಪಂಪ್‌ಸೆಟ್‌ಗಳು ಇದ್ದರೆ ಅವುಗಳನ್ನು ಸಕ್ರಮಗೊಳಿಸಲು ಇದುವರೆವಿಗೆ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮವೇನು?

ಇ) ತಾಲ್ಲೂಕಿನಾದ್ಯಂತ ರೈತರು ಪಂಪ್‌ಸೆಟ್‌ಗೆ ಸರ್ವೀಸ್ ತೆಗೆದುಕೊಳ್ಳಲು ಅರ್ಜಿ ಹಾಕಿದರೆ ಕೆ.ಇ.ಬಿ.ಯವರು ತಿರಸ್ಕಾರ ಮಾಡುವುದೇಕೆ?

ಈ) ಸಕ್ರಮವಾಗಿರುವ ಪಂಪ್‌ಸೆಟ್‌ಗಳಿಗೆ ವೋಲ್ಟೇಜ್ ಸಮಸ್ಯೆ ತಪ್ಪುವುದೆಂದು?

ಶ್ರೀ ವೀರಕುಮಾರ ಪಾಟೀಲ್ (ಮಾನ್ಯ ಇಂಧನ ರಾಜ್ಯ ಸಚಿವರು):

ಅ) ದಿನಾಂಕ 31. 12. 1999ರ ಅಂತ್ಯದಲ್ಲಿದ್ದಂತೆ ತುರುವೇಕೆರೆ ತಾಲ್ಲೂಕಿನಲ್ಲಿ ಒಟ್ಟು 1691 ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳು ಇವೆ.

ಆ) ರಾಜ್ಯದಲ್ಲಿನ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಬಳಕೆದಾರರು ತಮ್ಮ ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿಕೊಳ್ಳಲು ಅನುಕೂಲವಾಗುವಂತೆ ಒಂದು ಕಾರ್ಯಕ್ರಮವನ್ನು ಕ.ವಿ.ಪ್ರ.ನಿಗಮವು (ಹಿಂದಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ) ದಿನಾಂಕ: 1. 1. 1997ರಿಂದ ಜಾರಿಗೆ ತಂದಿರುತ್ತದೆ. ಈ ಕಾರ್ಯಕ್ರಮದಡಿಯಲ್ಲಿ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಬಳಕೆದಾರರು ಕ.ವಿ.ಪ್ರ. ನಿಗಮಕ್ಕೆ ಒಂದು ನಿರ್ದಿಷ್ಟ ಮೊತ್ತವನ್ನು ಪಾವತಿ ಮಾಡಿ ತಮ್ಮ ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿಕೊಳ್ಳಬಹುದಾಗಿರುತ್ತದೆ. ಈ ಕಾರ್ಯಕ್ರಮದ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಪಕ ಪ್ರಚಾರನೀಡಲಾಗಿರುತ್ತದೆ. ಇದರ ಉಪಯೋಗವನ್ನು ಬಹಳಷ್ಟು ಜನರಿಗೆ ತಲುಪಿಸುವ ಉದ್ದೇಶದಿಂದ ಸಕ್ರಮೀಕರಣಕ್ಕೆ ನಿಗದಿಪಡಿಸಿದ್ದ ಗಡುವನ್ನು ಮೂರು ಬಾರಿ ವಿಸ್ತರಿಸಲಾಗಿದೆ. ಅಂತಿಮವಾಗಿ ಸದರಿ ಅವಧಿಯನ್ನು ದಿನಾಂಕ:29-2-1999ರವರೆಗೆ ನಿಗದಿಪಡಿಸಲಾಗಿತ್ತು. ಅನೇಕ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಬಳಕೆದಾರರು ಇದರ ಉಪಯೋಗ ಪಡೆದುಕೊಂಡಿದ್ದು, ರಾಜ್ಯಾದ್ಯಂತ ದಿನಾಂಕ:31-12-99 ರವರೆಗೆ ಒಟ್ಟು 56,884 ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲಾಗಿದೆ. ತುರುವೇಕೆರೆ ತಾಲ್ಲೂಕಿನಲ್ಲಿಯೂ ಸಹ ಸದರಿ ಅವಧಿಯಲ್ಲಿ 173 ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲಾಗಿದೆ.

ಇ) ರಾಜ್ಯ ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ತುರುವೇಕೆರೆ ತಾಲ್ಲೂಕನ್ನು 'ಕಪ್ಪು' (ಡಾರ್ಕ್) ಪ್ರದೇಶವೆಂದು ಘೋಷಿಸಿದ್ದು, ಇಂತಹ ಪ್ರದೇಶಗಳಲ್ಲಿ ಯಾವುದೇ ನೀರಾವರಿ ಪಂಪ್‌ಸೆಟ್‌ಗಳ ವಿದ್ಯುದೀಕರಣ ಮಾಡಬಾರದೆಂದು ನಿಗಮಕ್ಕೆ ಆದೇಶಿಸಿರುತ್ತದೆ. ಆದರೆ ಇಂತಹ ಪ್ರದೇಶಗಳಲ್ಲಿ ಅನಧಿಕೃತವಾಗಿ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಪಡೆಯುವುದನ್ನು ತಡೆಗಟ್ಟಲು 'ಸ್ವಯಂ ಆರ್ಥಿಕ ಯೋಜನೆ'ಯಡಿ ಮಾತ್ರ ವಿದ್ಯುತ್ ಸಂಪರ್ಕ ಒದಗಿಸಲು ಆದೇಶ ನೀಡಿರುತ್ತದೆ. ಆದುದರಿಂದ ತುರುವೇಕೆರೆ ತಾಲ್ಲೂಕಿನಲ್ಲಿ ತಮ್ಮ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸುವ ಅರ್ಜಿದಾರರು ನಿಗಮಕ್ಕೆ ಒಂದು ನಿಗಧಿತ ಮೊತ್ತವನ್ನು ಪಾವತಿ ಮಾಡಿ 'ಸ್ವಯಂ ಆರ್ಥಿಕ ಯೋಜನೆ' ಯಡಿ ಮಾತ್ರ ವಿದ್ಯುತ್ ಸಂಪರ್ಕ ಪಡೆಯಬಹುದಾಗಿರುತ್ತದೆ.

ಈ) ಬೇಸಿಗೆ ಕಾಲದಲ್ಲಿ ನೀರಾವರಿ ಚಟುವಟಿಕೆಗಾಗಿ ಪಂಪ್‌ಸೆಟ್‌ಗಳ ಬಳಕೆಯು ತೀವ್ರಗೊಳ್ಳುವುದರಿಂದ ನೀರಾವರಿ ಪಂಪ್‌ಸೆಟ್‌ಗಳ 'ರಿಯಾಕ್ಟೀವ್ ಲೋಡ್'ನಿಂದಾಗಿ